ಶ್ರೀ ಎ. ಜೆ. ದೊಡ್ಡಮೇಟಿ.—ಉತ್ತರ ಕರ್ನಾಟಕದ ಪ್ರದೇಶದಲ್ಲಿ ಸುಮಾರು 48,000 ಧನಗಳಿಗೆ ಒಂದು ಆಸ್ಪತ್ರೆ ಇದೆ. ಮತ್ತು ಪ್ರತಿಯೊಂದು ತಾಲ್ಲೂಕಿಗೆ ಒಂದು ಆಸ್ಪತ್ರೆ ಇದೆ ಎಂದೂ ಸಹ ಹೇಳಿದ್ದೀರಿ. ಆದರೆ ಉತ್ತರ ಕರ್ನಾಟಕದಲ್ಲಿಯ ಒಂದೊಂದು ತಾಲ್ಲೂಕಿನ ಜನ ಸಂಖ್ಯೆಯು 80 ಸಾವಿರ ಇದೆ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.— ನೋಟೀಸ್.

ಶ್ರೀ ಪಿ. ಜಿ. ಸಿದ್ಧಾಂತಿ.—ದೊಡ್ಡ ದೊಡ್ಡ ಹಳ್ಳಿಗಳಿಗೆ ಸ್ಯಾಕ್‌ಮೆನ್ ಪುರವಠೆಮಾಡಿ ಕೊಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ವರ್ಷ ಹಾಗೆ ಪ್ರಯತ್ನಮಾಡಬೇಕೆಂದು ಇದ್ದೇವೆ. ಎಲ್ಲೆಲ್ಲಿ ಸಾಧ್ಯ ವಿದೆಯೋ ಅಲ್ಲಲ್ಲಿ ಹಳ್ಳಿಗಳಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ರಾಮಯ್ಯ.—ಹಳ್ಳಿಗಳಿಗೆ ಆಸ್ಪತ್ರೆಗಳನ್ನು ಕೊಡುವಾಗ ಏನಾದರೂ ನಿಬಂಧನೆ ಹಾಕಿ ಕೊಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ನಿಬಂಧನೆ ಏನೂ ಇಲ್ಲ. ಕಟ್ಟಡವನ್ನು ಕಟ್ಟಿಸಿ ಕೊಟ್ಟರೆ ಮುಂದೆ ಅವರ ಕೋರಿಕೆಯನ್ನು ಈಡೇರಿಸುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.— ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎಲ್ಲೆಲ್ಲಿ ಆಸ್ಪತ್ರೆಗಳನ್ನು ಪ್ರಾರಂಭಿಸಬೇಕೆಂದು ಇಟ್ಟುಕೊಂಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಇಂಥಲ್ಲಿಯೇ ಎಂದು ಇಲ್ಲ. ಆಸ್ಪತ್ರೆಯಾಗಬೇಕೆಂದು ಅರ್ಜಿಗಳು ಬಂದ ಸ್ಥಳಗಳಲ್ಲಿ ಮಾಡುತ್ತೇವೆ. ಆಸ್ಪತ್ರೆಯೂ ಬಹುದೂರ ಅಂತರದಲ್ಲಿ ಇದ್ದು ಜನಗಳಿಗೆ ತೊಂದರೆಯಾಗುತ್ತಿದ್ದರೆ ಅಂಥ ಸ್ಥಳವನ್ನು ನೋಡಿ ಆಸ್ಪತ್ರೆ ಕೊಡುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.—ಬಿಲ್ಡಿಂಗ್ ಕಟ್ಟಿಸಿ ಕೊಡದಿದ್ದರೆ ಆಸ್ಪತ್ರೆ ಕೊಡುವುದಿಲ್ಲವೇ ?

ಅಧ್ಯಕ್ಷರು.—ಈ ಪ್ರಶ್ನೆ ಇಲ್ಲಿ ಉದ್ಭವಿಸುವದಿಲ್ಲ.

ಶ್ರೀ ಎಲ್. ಸಿದ್ದಪ್ಪ.—ಹಳ್ಳಿಗಳಲ್ಲಯ ಆಸ್ಪತ್ರೆಗಳಲ್ಲ ವೆಟೆರಿನರಿ ಡಾಕ್ಟರರು ಇರುವುದಿಲ್ಲ ; ಆದರೆ ಸ್ಯಾಕ್‌ಮೆಟ್ ಇರುತ್ತಾರೆ. ಇದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಸದ್ಯಕ್ಕೆ ವೆಟೆರಿನರಿ ಗ್ಯಾಜುಯೇಟ್ಸ್ ಇಲ್ಲ.

ಶ್ರೀ ಜಿ. ಬಿ. ಶಂಕರರಾವ್.—ನಂಚಾರಿ ಆಸ್ಪತ್ರೆಗಳನ್ನು ಇಡುವುದು ಯೋಗ್ಯವಾಗುವುದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ಬಗ್ಗೆ ಯೋಚನೆ ಮಾಡುತ್ತೇವೆ.

Looms to Government Silk-Filatures, Kanakapura.

Q.—671. Sri S. KARIAPPA (Virupakshipura).—

Will the Government be pleased to state :—

(*a*) whether there is an approved proposal to add sufficient number of looms to Government Silk Filature, Kanakapura ;

(*b*) whether the proposal has been implemented ;

(*c*) if not, the reasons therefor ?

A.—Sri C. M. POONACHA (Minister for Home Affairs and Industries).—

(*a*) The proposal is under consideration.

(*b*) and (*c*) Does not arise in view of answer to clause (*a*).

ಶ್ರೀ ಎಸ್. ಕರಿಯಪ್ಪ.—ಕನಕಪುರದಲ್ಲಿರುವ ಸರ್ಕಾರದ ರೇಷ್ಮೆ ಫಿರೇಚರ್ ಕಾರ್ಖಾನೆಗೆ ಇನ್ನೂ ಕೆಲವು ಮಗ್ಗಗಳನ್ನು ಸೇರಿಸಬೇಕೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಎಷ್ಟು ಇರಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಶ್ರೀ ಎಸ್. ಕರಿಯಪ್ಪ.—ಈಗ ಇರತಕ್ಕಂಥ ಮಗ್ಗಗಳಿಗೆ ಇನ್ನೂ 50 ಮಗ್ಗಗಳನ್ನು ಸೇರಿಸಬೇಕೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಒಂದು ಯೋಜನೆಯು ಈ ಇಲಾಖೆಯವರ ಪರಿಶೀಲನೆಯಲ್ಲಿ ಇದೆ. ಇನ್ನೂ ಅವರ ಪರಿಶೀಲನೆ ಮುಗಿದಿಲ್ಲ.

ಶ್ರೀ ಎಸ್. ಕರಿಯಪ್ಪ.—ಕೇಂದ್ರ ಸರ್ಕಾರದಿಂದ ಸಹಾಯವನ್ನು ಕೋರಲಾಗಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಇನ್ನೂ ಇಲಾಖೆಯವರಿಂದ ಪರಿಶೀಲನೆಯಾಗಿ ಶಿಫಾರಸುಗಳು ಬಂದಿಲ್ಲ. ಅದು ಬಂದ ನಂತರ ಸರಕಾರ ಪರಿಶೀಲನೆಮಾಡಿ ಇಂಡಿಯಾ ಸರ್ಕಾರದವರಿಗೆ ಶಿಫಾರಸುಗಳನ್ನು ಕಳಿಸಿ ಕೊಡಲಾಗುವುದು.

ಶ್ರೀ ಎಂ. ಲಿಂಗೇಗೌಡ.—ಈಗ ಇರತಕ್ಕಂಥವುಗಳು ಕೈಮಗ್ಗಗಳಾಗಿವೆ. ಹೊಸದಾಗಿ ಕೊಡುವುದರಲ್ಲಿ ಕೈಮಗ್ಗಗಳನ್ನು ಕೊಡುವಿರೋ ಅಥವಾ ಪವರ್ ಲೂಮ್ಸ್ ಕೊಡುವಿರೋ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಇಲಾಖೆಯವರ ಪರಿಶೀಲನೆಯಲ್ಲಿ ಇದೆ. ಇನ್ನೂ ಸರಕಾರಕ್ಕೆ ಶಿಫಾರಸುಗಳು ಬಂದಿಲ್ಲ.

ಶ್ರೀ ಎಂ. ಲಿಂಗೇಗೌಡ.—ಎರಡು ವರ್ಷಗಳ ಹಿಂದೆ ಪವರ್ ಲೂಂ ಹಾಕುವುದಕ್ಕೆ ಒಂದು ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದು ತಮ್ಮ ರಿಕಾರ್ಡುಗಳಲ್ಲಿ ಇದೆಯೋ ?

ಶ್ರೀ ಸಿ. ಎಂ. ಪೂಣಚ್ಚ.—ನನ್ನ ಹತ್ತಿರವಿರುವ ರಿಕಾರ್ಡುಗಳಲ್ಲಿ ಈ ದಾಖಲೆ ಇಲ್ಲ.

Representation for release of land under Hebbanagatta Kavalu.

Q.—689. Sri A. R. KARISIDDAPPA (Arsikere).—

Will the Government be pleased to state :—

(*a*) whether they have not received any representation requesting them to release land under the Hebbanagatta Kavalu near Arsikere for cultivation purposes ;

(*b*) the action taken by them on that representation ?